# ಜೀರ್ಣೋದ್ಧಾರ -ನೆಲೆ, ಹಿನ್ನಲೆ

(ಹಿಂದಿನ ಸಂಚಿಕೆಯಿಂದ....)

**ಬ. ಎ. ಶರ್ಮ, ರಜತಪೀಠಪುರಂ**

..... ನೂತನ ದೇವಾಲಯ ನಿರ್ಮಾಣಕ್ಕಿಂತಲೂ ಜೀರ್ಣವಾದ ದೇವಾಲಯವನ್ನು ಉದ್ಧರಿಸಿದಲ್ಲಿ ಅತಿಶಯವಾದ ಪುಣ್ಯಪ್ರಾಪ್ತವಾಗುತ್ತದೆ.

*ಜೀರ್ಣೋದ್ಧೃತಿಂ ಸ್ಥಾಪಿತಮಂತ್ರ ಬಿಂಬ*
*ಗೃಹಾದಿಜೀರ್ಣೇ ಸಪದೀತಿ ಕುರ್ಯಾತ್ ।*
*ದುಃಸ್ಥೋಽನ್ಯಥಾ ಚೇದ್ವಿಪದೇ ತಥಾಚೇತ್,*
*ಸುಸ್ಥೋಽತ್ರ ದೇವೋ ಯದಿ ಸಂಪದೇ ಸ್ಯಾತ್॥*

ಪೂರ್ವಜರಿಂದ ಪ್ರತಿಷ್ಠಾಪಿತವಾದ ಮಂತ್ರ ಬಿಂಬ, ಪ್ರಾಸಾದಾದಿಗಳಿಗೆ ಜೀರ್ಣತೆಯುಂಟಾದರೆ ಕೂಡಲೇ ಜೀರ್ಣೋದ್ಧಾರ ಮಾಬೇಕು. ದೇವರು ದುಃಸ್ಥನಾದರೆ ವಿಪತ್ತುಗಳು ಬರುತ್ತವೆ. ಸುಸ್ಥನಾದರೆ ಸಂಪತ್ತುಂಟಾಗುತ್ತದೆ.

*ಆಕಲ್ಪಾಂತಸ್ಥಾಸ್ನು ಭಾವೇನ ಭಕ್ತ್ಯಾ ದೇವಸ್ಯೈವಂ*
*ಸಂಪ್ರತಿಷ್ಠಾಪಿತಸ್ಯ, ಪ್ರಾಸಾದಾದಿ ಸ್ವಾಂಗ*
*ಜೀರ್ತಿರ್ಯದಿ ಸ್ಯಾದುದ್ಧೃತ್ಯಾತಸ್ತನ್ನ ವಾಂಗೀಕ*
*ರೋತು ॥*

ಕಲ್ಪಾಂತ ಕಾಲದವರೆಗೆ ಇರಬೇಕೆಂಬ ಭಾವನೆಯಿಂದ, ಭಕ್ತಿಯಿಂದ ಪೂರ್ವಜರು ಸ್ಥಾಪಿಸಿದ ದೇವನಿಗೆ ಪ್ರಾಸಾದಾದಿಸ್ವಾಂಗಕ್ಕೆ ಜೀರ್ಣತೆ ಉಂಟಾದಾಗ ಅದನ್ನು ಉದ್ಧರಿಸಿ ನವೀಕರಿಸಬೇಕು. ಜೀರ್ಣೋದ್ಧಾರ ಮಾಡಲು ಬಿಂಬಚಲನೆ ಮಾಡುವುದಿದ್ದಲ್ಲಿ 2ವಿಧ. ಅದು ಸಂಕೋಚ ಮತ್ತು ನಿಷ್ಕ್ರಾಮಣ.

*ನಿಷ್ಕ್ರಾಮಣೇನ ವಿಧಿನಾಽತ್ರ ತದಂತರಂಗೇ,*
*ವೈಕಲ್ಯಭಾಜಿ ವಿತನೋತು ಯಥಾಪುರಂತತ್ ।*
*ಸಂಕೋಚನೇನ ಬಹಿರಂಗ ವಿಪದ್ಯದಶ್ಯ*
*ನಿಷ್ಕ್ರಾಮಣೇನ ಚಿರಕಾಲಚಿಕೀರ್ಷಿತಂ ಚೇತ್ ॥*

ಅಂತರಂಗಕ್ಕೆ ವೈಕಲ್ಯ ಬಂದಿದ್ದರೆ ನಿಷ್ಕ್ರಾಮಣ ವಿಧಿಬೇಕು. ಪುನಃ ಪ್ರತಿಷ್ಠೆಗೆ ಬಹು ಸಮಯ (ಒಂದು ತಿಂಗಳಿಗಿಂತ ಹೆಚ್ಚು) ಬೇಕಾಗುವುದಿದ್ದರೂ ನಿಷ್ಕ್ರಾಮಣಬೇಕು. ಬಹಿರಂಗದ ಜೀರ್ಣೋದ್ಧಾರ ವಾದರೆ ಸಂಕೋಚ ಸಾಕು.

*ಬಾಲಾಲಯಾದಿಸಹಿತಂ ಕಲಶೈಕಕಾರ್ಯಂ, ಚೇತಿ*
*ದ್ವಿಧಾಽತ್ರ ಖಲು ನಿಷ್ಕ್ರಮಣಂ ಸ್ಮರಂತಿ ।*
*ಸಂಕೋಚನಂ ಸ್ವವಿಭವಸ್ಯ ನಿಗೂಹನಂ ಸ್ಯಾತ್*
*ನಿಷ್ಕ್ರಾಮಣಕ್ರಮಮಿಹ ಪ್ರಥಮಂ ಬ್ರವೀಮಿ ॥*

ನಿಷ್ಕ್ರಾಮಣದಲ್ಲಿ 2 ವಿಧ. ಬಾಲಾಲಯಾದಿ ಸಹಿತವಾದದ್ದು ಮತ್ತು ಕಲಶದಿಂದಲೇ ಮಾಡಬಹುದಾದದ್ದು. ಸಂಕೋಚನವೆಂದರೆ ತನ್ನ ವೈಭವದ ರೂಪಗಳನ್ನು ತನ್ನಲ್ಲೇ ಅಡಗಿಸುವಿಕೆ.

*ಮೂಲಾಲಯಾದಕ್ಷಿಣ ಭಾಗಸಂಸ್ಥಂ ತತ್ಸಮ್ಮುಖಂ*
*ಬಾಲಗೃಹಂ ವಿಧಾಪ್ಯ।*
*ಸಮಂಡಪಂ ಶಿಲ್ಪಿ ಭಿರಲ್ಪ ಬಿಂಬಂ ಪ್ರಕಲ್ಪಯೇಲ್ಲೋಹಿಕ*
*ಮಾಂಘ್ರಿ ಪಂವಾ ॥*

ಮೂಲಾಲಯದ ದಕ್ಷಿಣವಲ್ಲದ ಭಾಗದಲ್ಲಿ ಮೂಲಾಲಯಕ್ಕೆ ಅಭಿಮುಖವಾಗಿ ಶಿಲ್ಪಿ ಗಳಿಂದ ಲೋಹದಿಂದ ಅಥವಾ ಮರದಿಂದ ಅಲ್ಪ ಬಿಂಬವುಳ್ಳ ಮಂಟಪ ಸಹಿತವಾದ ಬಾಲಗೃಹ ನಿರ್ಮಾಣ ಮಾಡಬೇಕು (ಅಂದರೆ ಈಶಾನ್ಯ) ವಿಶೇಷ ಶಾಸ್ತ್ರಜ್ಞನಾದ ತಂತ್ರಿಯು ನಿಷ್ಕ್ರಾಮಣಕ್ಕೆ ಮಾತ್ರ ಹೇಳಿದ ವಿಧಿಯನ್ನು ಬಿಟ್ಟು ಬೇರೆ ಎಲ್ಲಾ ಕರ್ಮವನ್ನು ಮಾಡಿ, ಪ್ರಾರ್ಥಿಸಿ, ತತ್ತ್ವ ಕಲಶದಿಂದ ಅಭಿಷೇಕಿಸಿ, ಪ್ರಾಸಾದ ಮಾತ್ರ ಜೀರ್ಣವಾಗಿದ್ದರೆ ಸಂಕೋಚವನ್ನು ಮಾಡಬೇಕು.

ಸ್ಥಾನ ಶುದ್ಧಿ ಹಾಗೂ ಬಿಂಬ ಶುದ್ಧಿಗೆ ವಿಹಿತವಾದ ಕರ್ಮಗಳು ಕ್ರಮವಾಗಿ 7 ವಿಧ.

*ಖನನಂ ಹರಣಂ ದಾಹಃ ಪೂರಣಂ*
*ಗೋನಿವಾಸಮ್ ।*
*ವಿಪ್ರೋಚ್ಛಿಷ್ಟ, ಪಂಚಗವ್ಯಂ ಸಪ್ತೈತಾಃ ಸ್ಥಾನ*
*ಶುದ್ಧಯಃ ॥*

ಖನನ, ಹರಣ, ದಾಹ, ಪೂರಣ, ಗೋನಿವಾಸ, ವಿಪ್ರೋಚ್ಛಿಷ್ಟಂ ಪಂಚಗವ್ಯ - ಈ 7 ಸ್ಥಾನ ಶುದ್ಧಿಗೆ ವಿಹಿತಕರ್ಮಗಳಾಗಿವೆ.

*ಕ್ಷಾಲನ ಪ್ಲಾವನ ಸ್ನಾನ ಮಾರ್ಜನಾನಿ ಯಥಾಕ್ರಮಮ್*
*ಧಾರಾಽವ ಗಾಹಸೇಕಾಶ್ಚ ಸಪ್ತೈತಾ ಬಿಂಬ*
*ಶುದ್ಧಯಃ ॥*

ಕ್ಷಾಲನ, ಪ್ಲಾವನ, ಸ್ನಾನ, ಮಾರ್ಜನ, ಧಾರಾ, ಅವಗಾಹ, ಸೇಕ - ಈ 7 ಬಿಂಬಶುದ್ಧಿಗೆ ವಿಹಿತ ಕರ್ಮಗಳು. ಪ್ರತಿಷ್ಠಾ ವಿಧಿಯಲ್ಲಿ ಷಡಾಧಾರ ಪ್ರತಿಷ್ಠಾ ವಿಧಿಯೂ ಒಂದು. ಹೆಸರೇ ಸೂಚಿಸುವಂತೆ 6 ಆಧಾರಗಳನ್ನು ಗರ್ಭಗುಡಿಯ ತಳಮಟ್ಟದಿಂದ ಬಿಂಬ ಪರ್ಯಂತ ಉಪಯೋಗಿಸಲಾಗುತ್ತದೆ.

*ಆಧಾರ ಪ್ರಸ್ತರಃ ಕುಂಭಃ ಪದ್ಮಂಚ ಕಮಠಂ ತಥಾ,*
*ನಾಲೋ ನಪುಂಸಕ ಶಿಲಾ ಷಡಾಧಾರಾ:*
*ಪ್ರಕೀರ್ತಿತಾ: ॥*

ಆಧಾರ ಶಿಲೆ, ನಿಧಿಕುಂಭ, ಪದ್ಮ, ಕೂರ್ಮ, ನಾಳ, ನಪುಂಸಕ ಶಿಲೆ - ಇವು ಷಡಾಧಾರಗಳು ಸ್ಥಿರ ಪ್ರತಿಷ್ಠೆಯಲ್ಲಿ ಅಷ್ಟಬಂಧವನ್ನು ಬಳಸುವುದು ಎಲ್ಲರಿಗೂ ತಿಳಿದ ವಿಷಯ. ಈ ಅಷ್ಟಬಂಧದಲ್ಲಿರುವ ವಸ್ತುಗಳಾವುವು ಎಂದು ತಿಳಿದುಕೊಳ್ಳೋಣ.

*ಶಂಖ: ಷಡ್ಗುಣತಃ ಪಯೋಧಿಗುಣಿತಃ ಸರ್ಜೋದ್ವಿ*
*ವೃದ್ಧಾಭಯಾ ಕಾರ್ಪಾಸೋಪಲ ವಾಲುಕಂ*
*ಸಜತುಕಾಃ ಪ್ರತ್ಯೇಕ ಮೇಕಾಂಶಕಾಃ ॥*
*ಲಾಕ್ಷಾರ್ಧಾಮಲಕೀ ಸಮೇತಮಖಿಲಂ ಸಂಚೂರ್ಣ್ಯ*
*ಸಂಯೋಜಿತಮ್ ತೈಲಕ್ಲಿಷ್ಟ ಸುಪಿಷ್ಟಮಾತ್ಮನವ*
*ಶಕ್ತ್ಯಾತ್ಮಾಷ್ಟ ಬಂಧಂ ವಿದುಃ ॥*

6 ಪಾಲುಶಂಖ, 4 ಪಾಲು ಸರ್ಜರಸ, 2 ಪಾಲು ಅಭಯ, ಒಂದೊಂದು ಪಾಲು ಕಾರ್ಪಾಸ, ಉಪಲ, ವಾಲುಕ, ಅರಗು, ಅರ್ಧಭಾಗ ಆಮಲಕಿ - ಇವೆಲ್ಲವನ್ನು ಚೆನ್ನಾಗಿ ಹುಡಿಮಾಡಿ ಎಳ್ಳೆಣ್ಣೆಯಿಂದ ಕಲಸಿದ ಅಷ್ಟಬಂಧವು ನವಶಕ್ತ್ಯಾತ್ಮಕವಾದರೆ ದೇವ ಸಾನಿಧ್ಯವನ್ನು ಹೆಚ್ಚಿಸುತ್ತದೆ. ಇನ್ನೊಂದು ಮತದ ಪ್ರಕಾರ ಶಂಖಚೂರ್ಣ, ಗುಡ್ಡ, ತ್ರಿಫಲ, ಶರ್ಕರ, ಅರಗು, ಹತ್ತಿಬೀಜ, ಕೃಷ್ಣ ಗುಗ್ಗುಲ, ಎಮ್ಮೆಯ ಬೆಣ್ಣೆ - ಇವು ಅಷ್ಟಬಂಧ ಸಾಧನಗಳಾಗಿವೆ. ಅಷ್ಟಬಂಧವಲ್ಲದೇ, ಪಂಚಬಂಧ, ತ್ರಿಬಂಧ ಎಂಬ ವಿಧಾನಗಳೂ ಇವೆ. ಪಂಚಬಂಧದಲ್ಲಿ ಎಮ್ಮೆಯ ಬೆಣ್ಣೆ, ಅರಗು, ಶರ್ಕರ, ಕಾರ್ಪಾಸ, ಗುಗ್ಗುಲಗಳನ್ನೂ; ತ್ರಿಬಂಧ ವಿಧಾನದಲ್ಲಿ ಶರ್ಕರ ಗುಗ್ಗುಲ ನವನೀತ ಈ 3ದ್ರವ್ಯಗಳನ್ನೂ ಬಳಸಲಾಗುತ್ತಿದೆ. ದೇವಾಲಯ ನಿರ್ಮಾಣಕ್ಕೆ ಉಪಯೋಗಿಸುವ ಭೂಮಿ ಪ್ರದೇಶ ಹೇಗಿರಬೇಕು ಎಂಬುವುದನ್ನು ತಿಳಿಯೋಣ

ಗೋಮರ್ತ್ಯೈಃ ಫಲಪುಷ್ಪ ದುಗ್ಧ ತರುಭಿಶ್ಚಾಢ್ಯಾ..... ಎಂಬುವುದಾಗಿ ಭೂಲಕ್ಷಣವನ್ನು ತಿಳಿಸಲಾಗಿದೆ. ಗೋವು, ಮಾನವ, ಫಲಪುಷ್ಪವಿರುವ ಹಾಲು ವೃಕ್ಷಗಳು, ಪ್ರಾಕ್‌ಪ್ಲವವಾದ ಸ್ಥಳ, ಪಸೆ (ಆರ್ದ್ರತೆ) ಇರುವ, ಗಂಭೀರ ಧ್ವನಿ ಇರುವ, ಪ್ರದಕ್ಷಿಣೆಯಾಗಿ ನೀರಿರುವ, ಬಿತ್ತಿದರೆ ಬೇಗನೇ ಮೊಳಕೆ ಬರುವ ತುಂಬಾ ಮೃದು ಮಣ್ಣಿರುವ, ಕೊರತೆ ಇಲ್ಲದ ಒರತೆ ಇರುವ, ಸಮಶೀತೋಷ್ಣವಾದ ಭೂಮಿಯು ಉತ್ತಮ. ಇದಕ್ಕೆ ವಿಪರೀತ ಲಕ್ಷಣವುಳ್ಳ ಭೂಮಿ ಅಧಮ. ಮಿಶ್ರವಾದರೆ ಮಿಶ್ರ ಎಂದು ತಿಳಿಯಬೇಕು. ಇದು ಉತ್ತಮ ಭೂಮಿಯ ಲಕ್ಷಣವಾಗಿದೆ.

*ತೀರ್ಥಾಂತೇ ತಟನೀತಟೇ ಜಲನಿಧೇಸ್ತೀರೇ*
*ಸರಿತ್ಸಂಗಮೇ, ಶೈಲಾಗ್ರೇಽದ್ರಿ ತಟೇ*
*ವನೋಪವನಯೋರುಧ್ಯಾನ ದೇಶೆ ತಥಾ।*
*ಸಿದ್ಧಾದ್ಯಾಯತನೇಷ ವಾ ಗುರುವರೋ ಗ್ರಾಮೇ*
*ಪುರೇ ಪತ್ತನೇ ದೇಶ್ಯಽನ್ಯತ್ರ ಮನೋರಮೇ*
*ಸುರಸಮಿಜ್ಞಾಯ್ಯೆ ಕ್ಷಿತಿಂಕಲ್ಪಯೇತ್ ॥*

ತೀರ್ಥದ ಸಮೀಪ, ಸರೋವರದ ಸಮೀಪ, ಸಮುದ್ರತೀರ, ನದೀ ಸಂಗಮ ಸ್ಥಾನ, ಪರ್ವತ ಪ್ರದೇಶ, ಕಾಡು, ಉದ್ಯಾನ, ಉಪವನ, ಸಿದ್ಧಕ್ಷೇತ್ರ, ಗ್ರಾಮಪುರ, ಪಟ್ಟಣ, ಒಳ್ಳೆಯ ಸುಂದರವಾದ ಸ್ಥಳದಲ್ಲಿ ದೇವಾಲಯ ನಿರ್ಮಾಣಕ್ಕೆ ಭೂಪರಿಗ್ರಹವನ್ನು ಮಾಡಬೇಕು.

(ಮುಂದುವರಿಯುವುದು)

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
**ಫೋನ್ : 2556536 (R), 2555466 (O)**
**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**
**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

# ಎಲೆ ಮರೆಯ ಕಾಯಿ-ಕಾದಂಬರಿಕಾರ 'ಅನುಬೆಳ್ಳೆ'

**ಕೃಷ್ಣಕುಮಾರ ರಾವ್ ಮಟ್ಟು**



"ಕಾನದಿ ಮಲ್ಲಿಗೆಯು
ಮೌನದಿಂ ಬಿರಿದು ನಿಜ।
ತಾನೆಲೆಯ ಪಿಂತಿದ್ದು
ದೀನತೆಯ ತೋರಿ ಅಭಿ।
ಮಾನವನು ತೊರೆದು ಕೃತಕೃತ್ಯೆಯ
ಪಡೆವಂತೆ॥

ಇದು ಖ್ಯಾತ ಕವಿ ಡಿ.ವಿ.ಜಿ.ಯವರ "ವನಸುಮ" ಕವಿತೆಯ ಒಂದು ಚರಣ. ಜನಿಸಿದ ಮೇಲೆ ಈ 'ವನಸುಮದಂತೆ' ಬದುಕಿನಲ್ಲಿ ಸಾರ್ಥಕತೆ ಪಡೆಯಬೇಕೆಂದು ಈ ಕವನದ ಸಾರ.

ಮನುಷ್ಯರಲ್ಲಿ ಹಲವಾರು ಜನ ಈ ಸಾಲಿಗೆ ಸೇರಿದವರಿದ್ದಾರೆ. ಬದುಕಿನಲ್ಲಿ ಏನಾದರೊಂದು ಸಾಧನೆಗಳಿಸಬೇಕೆಂದು ಹಂಬಲದಿಂದ ಹೋರಾಟ ಮಾಡುವವರಿದ್ದಾರೆ. ಅದರಲ್ಲಿಯೂ ಈ ಸಾಧನೆಯನ್ನು ಮಾಡಿದವರು ಬಹಳ ವಿರಳ. ಅಂತಹ ವ್ಯಕ್ತಿಗಳ ಸಾಲಿನಲ್ಲಿ ಸೇರುವ ನಮ್ಮ ಸಮಾಜದ ಯುವ ಲೇಖಕರಾದ ಶ್ರೀ ರಾಘವೇಂದ್ರ ರಾವ್ ಬೆಳ್ಳೆ. ನಮ್ಮ ಸ್ಥಾನಿಕ ಸಮಾಜಕ್ಕೊಂದು ಹೆಮ್ಮೆಯ ಕಿರೀಟ.

"ಅನುಬೆಳ್ಳೆ" ನಾಮಾಂಕಿತದಿಂದ ಹಲವಾರು ಲೇಖನಗಳನ್ನು ಬರೆಯುತ್ತಿರುವ ಶ್ರೀಯುತ ರಾಘವೇಂದ್ರ ರಾವ್ ಬೆಳ್ಳೆ, ಆಚಾರ್ಯ ಮಧ್ವರ ಜನ್ಮಸ್ಥಳವಾದ ಪಾಜಕಕ್ಷೇತ್ರವೆಂದು ಕೀರ್ತಿ ಪಡೆದ ಉಡುಪಿ ತಾಲೂಕಿನ ಪಡುಬೆಳ್ಳೆಯ ದಿ। ಗೋಪಾಲಕೃಷ್ಣ ರಾವ್ ಮತ್ತು ಶ್ರೀಮತಿ ರತ್ನಾ ಜಿ. ರಾವ್ ದಂಪತಿಗಳ ಪುತ್ರ.

ಎಳವೆಯಲ್ಲಿ ಗ್ರಾಮೀಣ ಪರಿಸರದ ಪ್ರಕೃತಿಯ ರಮ್ಯ ವಾತಾವರಣದಲ್ಲಿ ತಂದೆ-ತಾಯಿ ಸಹೋದರ ಸಹೋದರಿಯರೊಂದಿಗೆ ಕಲೆತು ಬೆಳೆದುಬಂದ ರಾಯರು ಪಡುಬೆಳ್ಳೆಯ ಸರಕಾರಿ ಹಿ.ಪ್ರಾ. ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ ಇನ್ನಂಜೆ ಹೈಸ್ಕೂಲಿನಲ್ಲಿ ಪಿ.ಯು.ಸಿ. ತನಕ ಓದಿ ಮುಂದೆ ಶಿರ್ವದ ಎಂ. ಎಸ್. ಆರ್. ಎಸ್. ಕಾಲೇಜಿನಲ್ಲಿ ವಾಣಿಜ್ಯ ಪದವಿಯನ್ನು ಪೂರೈಸಿದರು.

ತನ್ನ ಸಾಹಿತ್ಯ ಕೃಷಿಗೆ ಪೂರಕ ವಾತಾವರಣವು ತನ್ನ ಹೈಸ್ಕೂಲಿನಿಂದಲೇ ಹೊಂದಿದೆಯೆಂದು ಹೆಮ್ಮೆಯಿಂದ ಹೇಳಿಕೊಳ್ಳುವ ರಾಘವೇಂದ್ರ ರಾಯರು ಸಾಹಿತ್ಯದ ಬರವಣಿಗೆಗೆ ಸ್ವತಃ ಲೇಖಕಿಯಾದ ತನ್ನ ಅಕ್ಕ ಸೀತಾಲಕ್ಷ್ಮೀ (ತಮಿಳುನಾಡಿನಲ್ಲಿ ನೆಲೆಸಿದ್ದಾರೆ.)ಯವರೇ ಸ್ಫೂರ್ತಿ ಎಂದು ಹೇಳುತ್ತಾರೆ.

ಮಂಗಳೂರಿನ ವಿದ್ಯಾಸಂಸ್ಥೆಯೊಂದರಲ್ಲಿ ಎಕೌಂಟೆಂಟ್‌ರಾಗಿ ಸೇವೆ ಸಲ್ಲಿಸುತ್ತಿರುವ ರಾಯರು ಮಂಗಳೂರಿನ ಕೊಡಿಯಾಲ್ ಬೈಲ್‌ನಲ್ಲಿ ತಮ್ಮ ಪತ್ನಿ ಸ್ನೇಹಲತಾ ರಾವ್ ಹಾಗೂ ಪುತ್ರ ಅನುಸ್ವರ್‌ನೊಂದಿಗೆ ವಾಸಿಸುತ್ತಿದ್ದಾರೆ. ತಮ್ಮ ಬರವಣಿಗೆಯ ಕೆಲಸಕ್ಕೆ ಇವರ ಪ್ರೋತ್ಸಾಹವನ್ನೂ, ಸಹಕಾರವನ್ನೂ ಸದಾ ನೆನೆಯುತ್ತಾರೆ.

ಸುಮಾರು 60ಕ್ಕೂ ಮಿಕ್ಕಿ ಸಣ್ಣಕಥೆಗಳು, 20 ಕಾದಂಬರಿಗಳು, ಮಕ್ಕಳ ಕಥೆಗಳು, ಲಲಿತ ಪ್ರಬಂಧಗಳು, ವಿಮರ್ಶೆಗಳು ಇವರಿಂದ ರಚಿತವಾಗಿದೆ, ಮಾತ್ರವಲ್ಲ ನಾಡಿನ ವಿವಿಧ ದಿನ, ವಾರ, ಮಾಸ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

'ವಿಧಿ' ಇವರ ಮೊದಲ ಕಥೆಯಾದರೆ 'ಮುರಳಿಯ ನಾದವ ಕೇಳಿ' ಮೊದಲ ಕಾದಂಬರಿ.

**ಕಾದಂಬರಿಗಳು:** ಶಿಲ್ಪ ಬಂಡೆ, ನಕ್ಷತ್ರ ಬಳ್ಳಿ, ಬಣ್ಣದ ಕುಂಚ, ರಾಣಿಜೇನು ಹೂವು ಚೆಲುವೆಲ್ಲಾ, ವೇಣುಗಾನ ರಣಹದ್ದು, ನೀಲಿ ಬಾನಿನ ನಕ್ಷತ್ರ, ಪಾರಿವಾಳ, ಒಂದು ಸಾವಿನ ಸುತ್ತ, ಅಪೂರ್ವರಾಗ, ಜಲಪಾತ, ಆಕಾಶ ದೀಪವು ನೀನು, ಮುಗಿಲಿನಾಚೆ ಕಂಡ ಮಿಂಚು, ಜಾಡು, ಮುಂಜಾನೆ ಮುದುಡಿತು, ಮಿಡಿದ ಹಾಡು ಮಿಡಿವ, ಮುನ್ನ ಲಾಂದ್ರದ ಬೆಳಕು, ರಾಗದೀಪ

**ಲೇಖನಗಳು :** ಬೇ ಬ್ಲೇಡ್, ಬಣ್ಣದ ಬುಗರಿ, ಪುಸ್ತಕಗಳನ್ನು ಕೊಂಡು ಓದುವವರಿಲ್ಲ - ಒಂದು ಜಿಜ್ಞಾಸೆ, ಕನ್ನಡ ಚಿತ್ರರಂಗ ಮರೆತ ಕನ್ನಡದ ಕಾದಂಬರಿಗಳು, ಕಾದಂಬರಿ ಆಧಾರಿತ ಚಿತ್ರಗಳು, ಗೆಳೆಯ ಅನ್ನಲೇ ನಿನ್ನ...?, ಅಂಬಾತೀರ್ಥ - ನದಿಯ ನಡುವೆ ಬಂಡೆಗಳ ಚಿತ್ತಾರ, ಓದುವ ದೊಡ್ಡಗುಣ, ಪ್ರವೇಶ ಅನಿವಾರ್ಯವಾದರೆ ವಿಷವಾಗದಿರಲಿ ಸಂಬಂಧ, ಕ್ರೀಡಾ ಲೇಖನ, ಗೋಗೋವಾ.

**ಮಕ್ಕಳಕಥೆ:** ಗಾಳಿಪಟ, ರಾಜ ತರಿಸಿದ ಗಿಣಿ, ಗೆಳೆಯರು, ಜೇಡನ ಉಪಾಯ, ಬುದ್ಧಿವಂತ ಬಾಲಕ.

**ಪ್ರಬಂಧಗಳು :** ಗೆಣಸಿನ ಹಪ್ಪಳ, ಡ್ರೆಸ್ ಪುರಾಣ, ಹಾಟ್ ಆಗಿದೆ ರೇಡಿಯೋ, ರಜೆಗೊಂದು ಕಾರಣ, ಆಂಟಿ ವೈರಸ್.

**ಇತರ :** 'ಅವ್ಯಕ್ತ' ಟಿ.ವಿ. ಧಾರವಾಹಿಯಾಗಿ ಕಥಾ ವಿಸ್ತರಣೆ. ಫೋಟೊ ಕಾಮಿಕ್ಸ್‌ಗಾಗಿ ಚಿತ್ರಕಥೆ ಮತ್ತು ನಿರ್ದೇಶನ.

ಮೇಲಿನ ಕಾದಂಬರಿಗಳಲ್ಲಿ ಮುರಳಿಯ ನಾದ ಕೇಳಿ, ನಕ್ಷತ್ರಬಳ್ಳಿ, ಪರಿವಾಳ, ಹೂವು ಚೆಲುವೆಲ್ಲಾ, ರಾಣಿ ಜೇನು ಬಣ್ಣದ ಕುಂಚ, ಅಪೂರ್ವರಾಗ, ನಾಡಕೋವಿ, ಸುಳಿಗಾಳಿ ಮೊದಲಾದವುಗಳು ಪುಸ್ತಕರೂಪದಲ್ಲಿ ಪ್ರಕಟಗೊಂಡಿವೆ.

ಪುಸ್ತಕ ಪ್ರಕಟಿಸಲು ಕೆಲವು ಪಬ್ಲಿಕೇಶನ್ ಸಂಸ್ಥೆಗಳು ಆಸಕ್ತಿ ಹೊಂದಿದ್ದರೂ ಕಾರಣಾಂತರದಿಂದ ತನಗೇ ಹೆಚ್ಚು ಆರ್ಥಿಕ ಹೊರೆ ಬಿದ್ದಿದೆ ಎಂದು ನೋವಿನಿಂದ ಹೇಳುತ್ತಾರೆ ರಾಯರು.

**ಮುರಳಿಯ ನಾದವ ಕೇಳಿ** ಕಾದಂಬರಿಯು ಟ.ವಿ ಧಾರವಾಹಿಯಗಿ ಪ್ರಸಾರವಾಗುವ ದಿನ ಹತ್ತಿರದಲ್ಲಿದೆ.

ಶ್ರೀ ಅನುಬೆಳ್ಳೆಯವರ ಒಂದೆರಡು ಕಾದಂಬರಿ ಕಥೆಗಳನ್ನು ನಾನು ಓದಿರುತ್ತೇನೆ. ಸುಂದರ ಪದ - ವಾಕ್ಯಬಂಧ ದೀರ್ಘವಲ್ಲದ ಚಿಕ್ಕ ಸಂಭಾಷಣೆಗಳು, ನೇರ ನುಡಿ, ಓದುತ್ತಿದ್ದಂತೆ ಪೂರ್ಣ ಓದುವಂತೆ ಓದುಗನನ್ನು ಹಿಡಿದಿಟ್ಟು ಕೊಳ್ಳುವ ಸೆಳೆತ, ಕಥೆಯ ಕೊನೆಯವರೆಗೂ ಆಸಕ್ತಿದಾಯಕ ನಿರೂಪಣೆ ಮುಂತಾದವುಗಳ ಮೂಲಕ ಇನ್ನೂ ಬರೆಯಬಲ್ಲರು ಹಾಗೂ ಹೆಸರಾಂತ ಕವಿಯಾಗುವರೆಂಬ ಭಾವನೆ ಮೂಡುತ್ತದೆ.

ಕೇವಲ 37 ವಸಂತಗಳನ್ನು ಕಂಡ ಈ ತರುಣ ಸಾಹಿತಿಯ ಸಾಹಿತ್ಯಸೇವೆ ಎಲ್ಲರನ್ನು ಚಕಿತಗೊಳಿಸುವುದರಲ್ಲಿ ಸಂಶಯವಿಲ್ಲ. ಮೊದಲೇ ಹೇಳಿದಂತೆ "ಎಲೆಮರೆಯ ಕಾಯಿ"ಯಾದ ಇವರನ್ನು ಸಾಮಾಜಿಕವಾಗಿ ಸಾಹಿತಿಯಾಗಿ ಗುರುತಿಸುವ ಹೊಣೆಗಾರಿಕೆ ನಮ್ಮ ಸಮಾಜಕ್ಕಿದೆ. ಇವರ ಕೃತಿಗಳನ್ನು ಕೊಂಡು ಓದುವ, ಪ್ರಕಟಿಸುವ ಸಾಹಿತ್ಯಪ್ರಿಯರ ಪ್ರೋತ್ಸಾಹ ಇವರಿಗೆ ಅಗತ್ಯವಿದೆ.

ಶ್ರೀಯುತ ರಾಘವೇಂದ್ರ ರಾವ್ 'ಅನುಬೆಳ್ಳೆ'ಯವರಿಗೆ ಸಾಕಷ್ಟು ಪ್ರೋತ್ಸಾಹ ದೊರೆತು ತನ್ನ ವೃದ್ಧಾಪ್ಯದವರೆಗೆ ಜ್ಞಾನವನ್ನು ಬೆಳೆಸಿ ಇಂತಹ ಲೇಖನ, ಕಾದಂಬರಿಗಳನ್ನು ರಚಿಸಲಿ. ಆ ಮೂಲಕ ನಾಡಿನ ಗಣ್ಯ ಕವಿಗಳ ಸಾಲಿಗೆ ಸೇರುವಂತಾಗಲಿ ಎಂದು ಸಮಾಜ ಬಾಂಧವರೆಲ್ಲರ ಪರವಾಗಿ ಶ್ರೀ ಶಾರದಾ ಮಾತೆಗೆ ಪ್ರಾರ್ಥನೆ ಸಲ್ಲಿಸುತ್ತೇನೆ.

**ಅನುಬೆಳ್ಳೆಯವರ ವಿಳಾಸ :** ಶ್ರೀ ರಾಘವೇಂದ್ರ ರಾವ್ ಪ್ಲಾಟ್ ನಂ. 201 ಅಭಿಮಾನ್ ಅಪಾರ್ಟ್‌ಮೆಂಟ್, ಕೊಡಿಯಾಲಗುತ್ತು 4ನೇ ಅಡ್ಡ ರಸ್ತೆ, ಕೊಡಿಯಾಲ್ ಬೈಲ್ (ಈ) ಮಂಗಳೂರು - 575 003
ಮೊಬೈಲ್ : 98802 58933

**ವಧು-ವರರ ವೇದಿಕೆ**
**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.**
ಸಮಾಜದ ವಿವಾಹ ಯೋಗ್ಯ ವಧು-ವರರ ನೋಂದಾವಣೆ, ವಿವಿಧ ಮಾಹಿತಿ ಮೊದಲಾದವುಗಳನ್ನು ಆಸಕ್ತ ಹೆತ್ತವರು ಪಡೆದುಕೊಂಡು ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶವಿದೆ. ಸಮಾಜ ಬಾಂಧವರು ವೇದಿಕೆಯ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.
**- ಅಧ್ಯಕ್ಷರು, ವಧೂವರರ ವೇದಿಕೆ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ**